■ ಹನಿ



## ಭಾರತೀಯರ ಹೆಮ್ಮೆ

78 ಶತಕೋಟಿ ಡಾಲರ್ ಮೌಲ್ಯದ ಕಂಪೆನಿ ಮೈಕ್ರೊಸಾಫ್ಟ್‌ಗೆ ಈಗ ಭಾರತೀಯ ಸಾಫ್ಟ್‌ವೇರ್ ಎಂಜಿನಿಯರನ ಸಾರಥ್ಯ. ಆತನೇ ಹೈದರಾಬಾದ್‌ನ ಸತ್ಯನಾರಾಯಣ ನಾಡೆಲ್ಲಾ. ಕಳೆದ ವಾರವಿಡೀ ನಾಡಿನ ತುಂಬೆಲ್ಲಾ ಸತ್ಯನದ್ದೇ ಸುದ್ದಿ. 46ರ ಹರೆಯದ ಈ ಬುದ್ಧಿವಂತ ಈಗ ವರ್ಷಕ್ಕೆ 112 ಕೋಟಿ ರೂಪಾಯಿ ಸಂಬಳದ ಒಡೆಯ. ಬಿಲ್ ಗೇಟ್ಸ್ ಕಟ್ಟಿದ ಸಾಮ್ರಾಜ್ಯದ ಮುಂದಿನ ಹೆಜ್ಜೆಗಳನ್ನು ನಿರ್ಧರಿಸಬೇಕಾದ ಅತಿ ದೊಡ್ಡ ಹೊಣೆಗಾರಿಕೆ. ಸತ್ಯ ಮಣಿಪಾಲದ ಎಂಐಟಿ ಯಲ್ಲಿ ಬಿಇ ಮಾಡಿದ್ದ-ರಿಂದ ಕನ್ನಡಿಗರಿಗೂ ಒಂದು ಕೋಡು ಮೂಡಿದೆ. ಪೆಪ್ಸಿಕೊ ಕಂಪೆನಿಯ ಸಿಇಒ ಆಗಿರುವ ಇಂದ್ರಾ ನೂಯಿ, ವಿಶ್ವದಲ್ಲೇ ಅತಿ ಪ್ರತಿಷ್ಠಿತ ಭಾರತೀಯ ಸಿಇಒ ಎಂದೆನ್ನಿಸಿದ್ದರು. ಈಗ ಸತ್ಯ ನಾಡೆಲ್ಲಾ ಅವರನ್ನು ಹಿಂದಿಕ್ಕಿ ಮೊದಲ ಸ್ಥಾನದಲ್ಲಿದ್ದಾರೆ.

ಮೈಕ್ರೊಸಾಫ್ಟ್ ಹುಟ್ಟಿದ್ದು 1975ರಲ್ಲಿ. ನಾಡೆಲ್ಲಾ ಅಲ್ಲಿಗೆ ಸೇರಿದ್ದು 1992ರಲ್ಲಿ. ಕಳೆದ 22 ವರ್ಷಗಳಿಂದ ಕಂಪೆನಿಯ ಒಳಗಿರುವ ನಾಡೆಲ್ಲಾಗೆ ಕಂಪೆನಿಯ ತಾಂತ್ರಿಕ ನೈಪುಣ್ಯದ ಎಲ್ಲ ಸುಳಿಗಳೂ ಗೊತ್ತು. ಕಂಪೆನಿಯ ಸ್ಥಾಪಕ ಸಿಇಒ ಬಿಲ್ ಗೇಟ್ಸ್ ಕೂಡಾ ಪ್ರೋಗ್ರಾಮರ್ ಆಗಿದ್ದವರು. ಆ ಬಳಿಕ ಸಿಇಒ ಆದ ಸ್ಟೀವ್ ಬಾಲ್ಮರ್ ಮೂಲತಃ ಮಾರ್ಕೆಟಿಂಗ್ ಮನುಷ್ಯ. ಸತ್ಯ ಮೂಲಕ ಈಗ ಕಂಪೆನಿ ಮತ್ತೆ ಟೆಕ್ನಿಕಲ್ ವ್ಯಕ್ತಿಯ ತೆಕ್ಕೆಗೆ ಬಂದಿದೆ. ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ವಿಶೇಷ ಕಾರ್ಯದರ್ಶಿ ಆಗಿದ್ದ ಐಎಎಸ್ ಅಧಿಕಾರಿ ಬಿ.ಎನ್.ಯುಗಂಧರ್‌ರ ಮಗ ಸತ್ಯ. ಪಿವಿಎನ್ ಗೆ ಕಾರ್ಯದರ್ಶಿ ಆಗಿದ್ದ ಕೆ.ಆರ್.ವೇಣುಗೋಪಾಲ್ ಅವರ ಮಗಳು ಅನುಪಮಾಳನ್ನು ಮದುವೆ-ಯಾಗಿರುವ ಸತ್ಯ ನಾಡೆಲ್ಲಾಗೆ ಮೂವರು ಮಕ್ಕಳು.

ಮೂಲತಃ ತಂತ್ರಜ್ಞಾನದ ವ್ಯಕ್ತಿಯಾಗಿರುವ ಸತ್ಯ, ಕಂಪೆನಿಯ ಮಾರುಕಟ್ಟೆಯನ್ನು ಸಂಭಾಳಿಸಲು ಸಾಧ್ಯವೆ ಎನ್ನುವ ಪ್ರಶ್ನೆ ಇದೆ. ವಿಶ್ವಾದ್ಯಂತ ಇರುವ ಪರ್ಸನಲ್ ಕಂಪ್ಯೂಟರ್‌ಗಳಲ್ಲಿ ಶೇಕಡಾ 90ರಷ್ಟು ಮೈಕ್ರೊಸಾಫ್ಟ್‌ನ ವಿಂಡೋಸ್ ಅನ್ನೇ ಬಳಸುತ್ತಿವೆ. ಆದರೆ ಹೊಸದಾಗಿ ಮಾರುಕಟ್ಟೆಗೆ ದಾಳಿ ಇಟ್ಟಿರುವ ಸ್ಮಾರ್ಟ್ ಫೋನ್‌ಗಳಲ್ಲಿ ವಿಂಡೋಸ್ ಪಾಲು ಶೇಕಡಾ 4 ಮಾತ್ರ! ಟ್ಯಾಬ್ಲೆಟ್‌ಗಳ ಮಾರುಕಟ್ಟೆಯನ್ನು ಹಿಡಿಯಲೂ ಮೈಕ್ರೊಸಾಫ್ಟ್‌ಗೆ ಆಗಿಲ್ಲ. ಅದೇ ಸತ್ಯ ಮುಂದಿರುವ ಸದ್ಯದ ಸವಾಲು. ಬಿಲ್ ಗೇಟ್ಸ್ ತಾಂತ್ರಿಕ ಸಲಹೆಗಾರರಾಗಿ ಕೆಲಸ ನಿರ್ವಹಿಸಲು ಒಪ್ಪಿರುವುದರಿಂದ ಸತ್ಯ ಕೆಲಸ ಸ್ವಲ್ಪ ಹಗುರವಾಗಲಿದೆ ಎನ್ನುವುದು ಕಂಪೆನಿಯ ಲೆಕ್ಕಾಚಾರ. ವಿಶ್ವದ ಈ ನಾಲ್ಕನೇ ಅತಿದೊಡ್ಡ ಕಂಪೆನಿ ಗೂಗಲ್ ಮತ್ತು ಆ್ಯಪಲ್ ಕಂಪೆನಿಗಳ ಸ್ಪರ್ಧೆಯನ್ನು ಹೇಗೆ ಎದುರಿಸಲಿದೆ ಎನ್ನುವುದೀಗ ಉಳಿದವರ ಕುತೂಹಲ.



## ಪೀಟರ್ಸನ್ ದುಃಖ

'ನಿಜಕ್ಕೂ ದುಃಖವಾಗುತ್ತದೆ, ಆದರೆ ಒಂದು ದಿನ ಈ ಕ್ರಿಕೆಟ್ ಪಯಣ ಮುಗಿಯಲೇಬೇಕಲ್ಲ? ದೇಶಕ್ಕಾಗಿ ಚೆನ್ನಾಗಿ ಆಡಿದ ಹೆಮ್ಮೆಯಂತೂ ಇದೆ' ಎಂದಿದ್ದಾರೆ ಕೆವಿನ್ ಪೀಟರ್ಸನ್. ಕಳೆದ ವಾರ ಇಂಗ್ಲೆಂಡಿನ ಕ್ರಿಕೆಟ್ ಆಯ್ಕೆ ಮಂಡಳಿ ಪೀಟರ್ಸನ್‌ರನ್ನು ಬಲವಂತವಾಗಿ ನಿವೃತ್ತಿಯತ್ತ ತಳ್ಳಿತು. 'ಮುಂದಿನ ವೆಸ್ಟಿಂಡೀಸ್ ಪ್ರವಾಸಕ್ಕೆ ಇಂಗ್ಲೆಂಡ್ ತಂಡದಿಂದ ನಿಮ್ಮನ್ನು ಕೈಬಿಡಲಾಗಿದೆ' ಎಂದು ನೇರವಾಗಿ ಹೇಳಿ, ಪೀಟರ್ಸನ್ ಗೆ ಬಾಗಿಲ ಕಡೆಗೆ ಕೈತೋರಿತು. ಅದರ ಬೆನ್ನಲ್ಲೇ 34ರ ಹರೆಯದ ಪೀಟರ್ಸನ್, 'ಒಂದು ದಿನದ ಅಂತರ-ರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತನಾಗಿದ್ದೇನೆ. ಆದರೆ ಟೆಸ್ಟ್ ಆಡುವ ಆಸೆ ಇದೆ' ಎಂದ!

ಇಂಗ್ಲೆಂಡ್ ಕಂಡ ಅತ್ಯಂತ ವೇಗದ ಬ್ಯಾಟ್ಸ್‌ಮನ್ ಈ ಪೀಟರ್ಸನ್. ಇಂಗ್ಲೆಂಡ್ ಪರ ಒಂದು ದಿನ ಕ್ರಿಕೆಟ್‌ನಲ್ಲಿ ಅತ್ಯಂತ ವೇಗವಾಗಿ 1000 ಮತ್ತು 2000 ರನ್ ಸೇರಿಸಿದ ದಾಖಲೆ ಆತನ ಹೆಸರಿನಲ್ಲೇ ಇದೆ. 2007ರಲ್ಲಿ ಐಸಿಸಿ ರ್‍ಯಾಂಕಿಂಗ್‌ನಲ್ಲಿ ಮೊದಲ ಸ್ಥಾನ ಪಡೆದ ಪೀಟರ್ಸನ್ ಮರುವರ್ಷ ಇಂಗ್ಲೆಂಡಿನ 'ಮೋಸ್ಟ್ ಕಂಪ್ಲೀಟ್ ಬ್ಯಾಟ್ಸ್‌ಮನ್' ಎಂದು ಟೈಮ್ ಪತ್ರಿಕೆಯಿಂದ ಬಿರುದು ಪಡೆದಿದ್ದ. 136 ಒಂದು ದಿನ ಪಂದ್ಯಗಳಲ್ಲಿ 13,797 ರನ್ ಹೊಡೆದಿರುವುದು ಬಹುದೊಡ್ಡ ಸಾಧನೆಯೇ. 104 ಟೆಸ್ಟ್ ಮತ್ತು 37 ಟ್ವೆಂಟಿ:20 ಪಂದ್ಯಗಳ ಗರಿ ಇಟ್ಟುಕೊಂಡಿರುವ ಪೀಟರ್ಸನ್‌ರನ್ನು ವಿಶ್ವ ಬಾಕ್ಸಿಂಗ್ ಚಾಂಪಿಯನ್ ಮೊಹಮ್ಮದ್ ಅಲಿಗೆ ಹೋಲಿಸುವವರೂ ಇದ್ದಾರೆ. ಅದಕ್ಕೆ ಈತನ ಗಟ್ಟಿ ಗಂಟಲೇ ಕಾರಣ. 2015ರ ವಿಶ್ವಕಪ್‌ನಲ್ಲಿ ದೇಶದ ಪರ ಆಡಬೇಕೆಂಬ ಕನಸು ಪೀಟರ್ಸನ್‌ಗೆ ಇದ್ದದ್ದು ಸುಳ್ಳಲ್ಲ. ಆದರೆ ಇತ್ತೀಚೆಗೆ ನಡೆದ ಆಸ್ಟ್ರೇಲಿಯಾ ವಿರುದ್ಧದ ಆ್ಯಶಸ್ ಸರಣಿಯಲ್ಲಿ ಇಂಗ್ಲೆಂಡ್ ಅನುಭವಿಸಿದ 0–5 ಸೋಲಿಗೆ ಈಗ ಪೀಟರ್ಸನ್ ದಂಡ ತೆತ್ತಂತಾಗಿದೆ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65